ಮೊದಲಾದ ಕವಚಾದಿಗಳಿಂದ ಚಿಕ್ಕದಾಗಿ ತಿಳಿದು ನಾವೇ ಅದಕ್ಕೆ ಅಪಮಾನ ಮಾಡುತ್ತಾ, ಜೀವನದ ಸಕಲ ದ್ವಂದ್ವಗಳಿಗೂ ಎಡೆಮಾಡಿಕೊಡುತ್ತಿದ್ದೇವೆ. ಪದೇ ಪದೇ ಈ 'ಅಹಂ ತತ್ತ್ವ'ದ ಔನ್ನತ್ಯ, ಔದಾತ್ಯ, ಬೃಹತ್ತ್ವತೆ, ವೈಶಾಲ್ಯಾದಿಗಳನ್ನು ಮನನ ಮಾಡಿಕೊಳ್ಳುತ್ತಿದ್ದಲ್ಲಿ ಮಾನಾಪಮಾನ ಸುಖ ದುಃಖಾದಿ ಭಾವೋದ್ವೇಗಗಳ ಪ್ರಭಾವ ವಲಯದಲ್ಲಿ ಸಿಲುಕಿ ತೊಳಲಾಡಿ, ನರಳದೆ, ಶಾಂತಿ-ನೆಮ್ಮದಿಗಳನ್ನು ಹೊಂದಲು ಸಾಧ್ಯವಿದೆ.

ಸಂಸಾರಿಗಳಿಗೆ ಇದು ನಿರಂತರ ಸಾಧ್ಯವಿಲ್ಲವಾದರೂ ಹೊಡೆತ್ತ, ಆನಂದೋದ್ರೇಕ ಉಂಟಾದಾಗಲಾದರೂ, ಈ ತತ್ತ್ವಸ್ವರೂಪವನ್ನು ಮನನ ಮಾಡುವುದರಲ್ಲಿ ಕ್ಷೇಮವಿದೆ. ಅವರೂ ನೆಮ್ಮದಿಯಿಂದಿದ್ದು ಅವರ ಬಳಿಯಲ್ಲಿ ಸುಳಿದಾಡುವವರಿಗೂ ಸುಖ, ಶಾಂತಿ, ನೆಮ್ಮದಿಗಳನ್ನು ಕೊಡಬಲ್ಲರು. ಇದು ಸಕಲರಿಗೂ ಶ್ರೇಯಃ ಪ್ರೇಯೋ ಮಾರ್ಗ.

*'ದಾಸ ಅಹಂ', 'ಜ್ಞಾನಿ ಅಹಂ'*
*ಅಥವಾ 'ಭಕ್ತ ಅಹಂ' ಇವುಗಳನ್ನು 'ಪಕ್ವ*
*ಅಹಂ' ಎಂದು ಕರೆಯಬಹುದು. ಇದು*
*'ಅಪಕ್ವ ಅಹಂ'ಗಿಂತ ಬೇರೆಯಾದುದು.*
*'ನಾನು ಕರ್ತ', 'ನಾನು ಶ್ರೀಮಂತನ ಮಗ',*
*'ನಾನು ಪಂಡಿತ', 'ನಾನು ಧನಿಕ', 'ನನಗೆ*
*ಅವಮಾನ ಮಾಡಲು ನಿನಗೆಷ್ಟು*
*ಧೈರ್ಯ' ಎಂದೆಲ್ಲ ಹೇಳುವುದು*
*'ಅಪಕ್ವ ಅಹಂ'*
—ಶ್ರೀರಾಮಕೃಷ್ಣ

# ಸಮಾಜದ ಸಮತೋಲನದಲ್ಲಿ ಸೇವಾಸಂಸ್ಥೆಗಳ ಪಾತ್ರ

ಜಿ.ಎಸ್. ಜಯದೇವ

ಸಮಾಜದಲ್ಲಿ ಸಮಾನತೆಯನ್ನು ಉಂಟುಮಾಡಲು ಇತಿಹಾಸದುದ್ದಕ್ಕೂ ಹಲವು ಪ್ರಯತ್ನಗಳು ನಡೆದಿರುವುವು.ಆದರೆ ಇಂದಿಗೂ ಸಮಾನತೆಯೆಂಬುದು ಕೇವಲ ಆದರ್ಶವಾಗಿಯೇ ಉಳಿದುಕೊಂಡಿದೆ. ಆದರೂ ಈ ಪ್ರಯತ್ನ ಹಲವು ಸಾಮಾಜಿಕ ದೋಷಗಳನ್ನು ಸ್ಥಳೀಯವಾಗಿಯಾದರೂ ನಿವಾರಿಸುವುದರಲ್ಲಿ ಯಶಸ್ವಿಯಾಗಿದೆ. ಈ ದಿಶೆಯಲ್ಲಿ ಸೇವಾಸಂಸ್ಥೆಗಳ ಪಾತ್ರ ಬಹು ಮುಖ್ಯವೆಂದು ಅಭಿಪ್ರಾಯ ಪಡುತ್ತಾರೆ ಶ್ರೀ ಜಯದೇವ. ಇವರು 'ದೀನಬಂಧು' 'ಶಕ್ತಿಧಾಮ' ಮುಂತಾದ ಸೇವಾಸಂಸ್ಥೆಗಳನ್ನು ನಡೆಸುತ್ತಿರುವರು.

## ಉದಾತ್ತತೆ ಮತ್ತು ಸ್ವಾರ್ಥತೆ

ಪ್ರಪಂಚದ ಎಲ್ಲ ಜೀವಿಗಳೂ ತಮ್ಮ ಪರಿಸರದಲ್ಲಿ ದೊರೆಯುವ ನಿಸರ್ಗದತ್ತ ಪರಿಕರಗಳನ್ನು ಬಳಸಿಕೊಂಡೇ ಬದುಕಬೇಕಾಗಿರುವುದರಿಂದ ಇರುವುದನ್ನು ಹಂಚಿಕೊಂಡು ಬಾಳುವುದು ಅನಿವಾರ್ಯ. ಕೆಳವರ್ಗದ ಪ್ರಾಣಿಪಕ್ಷಿಗಳಲ್ಲಿ ಇದಕ್ಕಾಗಿ ನಿರಂತರ ಸ್ಪರ್ಧೆ ನಡೆದಿದ್ದು ಜೀವ ವಿಕಾಸಕ್ಕೆ ದಾರಿ ಮಾಡಿಕೊಟ್ಟಿದೆ. ಈ ಪ್ರಕ್ರಿಯೆಯ ಮೂಲತತ್ತ್ವ 'ಯೋಗ್ಯತೆಯುಳ್ಳದ್ದು ಉಳಿಯುವುದು' (*Survival of the fittest*) ಎಂಬುದನ್ನು ಡಾರ್ವಿನ್ ಬಹಳ ಚೆನ್ನಾಗಿ ಗುರುತಿಸಿದ.

ಆದರೆ ಮನುಷ್ಯಪ್ರಪಂಚದಲ್ಲಿ 'ಯೋಗ್ಯತೆಯುಳ್ಳದ್ದು ಉಳಿಯುವುದು' ಎನ್ನುವುದು ಒಂದು ಅನಾಗರಿಕ ಕಾಡುನಿಯಮ ಎಂದು ಪರಿಗಣಿಸಲಾಗುತ್ತದೆ. ಸಂಘಜೀವಿಯಾದ ಮನುಷ್ಯನಿಗೆ ಪುಣ್ಯವಶಾತ್ ಪ್ರಕೃತಿದತ್ತವಾದ ಕೆಲವು ವೈಚಾರಿಕ ಮತ್ತು ಭಾವನಾತ್ಮಕ ಸಾಮರ್ಥ್ಯಗಳಿವೆ. ಹಾಗಾಗಿ ಅವನಿಗೆ ತನ್ನ ಬದುಕು ಎಷ್ಟು ಮುಖ್ಯವೊ ಹಾಗೆ ತನ್ನ ಸಹಜೀವಿಗಳೆಲ್ಲರ ಬದುಕೂ ಅಷ್ಟೇ ಮುಖ್ಯ. ತನ್ನ ಸುಖ ಸಂತೋಷದ ಹಾಗೆ ಇತರರ ಸುಖ ಸಂತೋಷವೂ ಮುಖ್ಯ. ಈ ಭಾವನಾತ್ಮಕ ಸಾಮರ್ಥ್ಯವೇ ಸಮಾಜವಾದದ ಮೂಲಸೆಲೆ. ಆದರೆ ಈ ಸದ್ಭಾವನಾ ಸಾಮರ್ಥ್ಯದ ಜೊತೆಗೆ ಮನುಷ್ಯನಲ್ಲಿ ಅಡಗಿರುವ ಸ್ವಾರ್ಥ ಇಂತಹ ಆದರ್ಶ ಸಮಾನತೆ ಮೂಡಲು ದೊಡ್ಡ ಅಡಚಣೆಯಾಗಿದೆ. ವಾಸ್ತವವಾಗಿ ಸಮಾನತೆಗಾಗಿ ನಡೆಯುತ್ತಿರುವ ಹೋರಾಟ ಮನುಷ್ಯನ ಉದಾತ್ತತೆಯ ಮತ್ತು ಸ್ವಾರ್ಥದ ನಡುವೆ ನಡೆಯುತ್ತಿರುವ ಹೋರಾಟವೆಂದೇ ಹೇಳಬೇಕು.

## ಸಮಾನತೆಯ ಕನಸು

ತಜ್ಞರ ಪ್ರಕಾರ ನಾಗರಿಕತೆಗೆ ಪೂರ್ವದಲ್ಲಿ ಸಾಮೂಹಿಕ ಒಡೆತನವಿದ್ದಿತು. ಆದ್ದರಿಂದ ಸಂಪತ್ತಿನ ಸಮಾನ ಹಂಚಿಕೆಯೂ ಇದ್ದಿತು. ಆದರೆ ಕ್ರಮೇಣ ಸಾಮೂಹಿಕ ಒಡೆತನ ವೈಯಕ್ತಿಕ ಒಡೆತನಕ್ಕೆ ದಾರಿ ಮಾಡಿಕೊಟ್ಟಿತಾದ್ದರಿಂದ ಸಂಪತ್ತಿನ ಅಸಮಾನ ಹಂಚಿಕೆ ಪ್ರಾರಂಭವಾಯಿತು. ಶ್ರೀಮಂತ ಬಡವರ ವರ್ಗೀಕರಣವೂ ಪ್ರಾರಂಭವಾಯಿತು. ಬೈಬಲ್‌ನಲ್ಲಿ ಶ್ರೀಮಂತರನ್ನು ಕ್ರಿಸ್ತ ಖಂಡಿಸುತ್ತಾನೆ. 'ಒಂದು ಒಂಟೆ ಸೂಜಿಕಣ್ಣಿನ ಮುಖಾಂತರ ಹಾಯಬಹುದು, ಆದರೆ ಶ್ರೀಮಂತರಿಗೆ ಸ್ವರ್ಗದ ಬಾಗಿಲನ್ನು ಪ್ರವೇಶಿಸುವುದು ಸಾಧ್ಯವಿಲ್ಲ'(ಸೇಂಟ್ ಮ್ಯಾಥಿವ್,೧೯.೨೪-೨೫) ಎನ್ನುತ್ತಾನೆ. ಮನುಷ್ಯನು ಲೋಭಿಯಾದ್ದರಿಂದ ಉಪನಿಷತ್ತಿನ ಕಥೆಯಲ್ಲಿ ದೇವರು ಮನುಷ್ಯನಿಗೆ ದಾನಮಾಡು ಎಂದು ಬುದ್ಧಿ ಹೇಳುವ ಪ್ರಸಂಗ ಒಂದಿದೆ. ಹೀಗೆ ಎಲ್ಲರೂ ಸಮಾನರಾಗಿ ಬದುಕಬೇಕೆಂಬ ಸುಖೀರಾಜ್ಯದ ಅಥವಾ ರಾಮರಾಜ್ಯದ ಕಲ್ಪನೆ ಇಂದು ನೆನ್ನೆಯದಲ್ಲ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಈ ಕನಸಿಗೆ ಪುಸ್ತಕ

ರೂಪ ಕೊಟ್ಟವರೆಂದರೆ ಸರ್ ಥಾಮಸ್ ಮೋರ್. ೧೫೧೬ರಲ್ಲಿ ಇವರು ಬರೆದ **'ಯುಟೋಪಿಯ'** ಎಂಬ ಪುಸ್ತಕವು ದ್ವೀಪ ಒಂದರಲ್ಲಿ ವಾಸಿಸುವ ಒಂದು ಆದರ್ಶ ಸಮಾಜದ ಕಥೆಗೆ ಸಂಬಂಧಿಸಿದುದು . ಇಲ್ಲಿ ಎಲ್ಲರೂ ದುಡಿಯುತ್ತಾರೆ ಮತ್ತು ಉತ್ಪನ್ನಗಳನ್ನು ಹಂಚಿಕೊಳ್ಳುತ್ತಾರೆ. ಆದ್ದರಿಂದ ಇಲ್ಲಿ ಹಣವೆಂಬುದೇ ಇಲ್ಲ. 'ಯುಟೋಪಿಯ' ಮೂಲತಃ ಗ್ರೀಕ್ ಪದ. ಇದರರ್ಥ ಎಲ್ಲೂ ಇಲ್ಲದ ಸ್ಥಳ ಎಂದು. ಆದರೆ ಸರ್ ಥಾಮಸ್ ಮೋರ್‌ರವರ ಪುಸ್ತಕದ ನಂತರ ಯಾವುದಕ್ಕೂ ಕೊರತೆ ಇಲ್ಲದ ರಾಜ್ಯ ಎಂಬ ಅರ್ಥವನ್ನು ಪಡೆಯಿತು.

## ಎರಡು ವಾದಗಳು

ಹೀಗೆ ಸಮಾಜದಲ್ಲಿ ಸಮಾನತೆ ಸಾಧಿಸಲು ಪ್ರಯತ್ನ ಅವಿರತವಾಗಿ ಸಾಗಿ ಬಂದಿದೆ. ಈ ನಿಟ್ಟಿನಲ್ಲಿ ಮುಖ್ಯವಾಗಿ ಎರಡು ವಾದಗಳು ಮನುಷ್ಯನ ಚಿಂತನೆಯ ಮೇಲೆ, ಜೀವನ ವಿಧಾನಗಳ ಮೇಲೆ ಗಾಢ ಪ್ರಭಾವ ಬೀರುತ್ತಿವೆ. ಮೊದಲನೆಯದು ಸಮಾಜವಾದ, ಎರಡನೆಯದು ಕಮ್ಯುನಿಸ್ಟ್‌ವಾದ. ಸಮಾಜವಾದ ಪದದ ಅರ್ಥವ್ಯಾಪ್ತಿ ವಿಸ್ತಾರವಾಗಿದ್ದು ಅನೇಕ ದ್ವಂದ್ವಗಳಿಗೆ ಕಾರಣವಾಗಿದ್ದರೂ ಅದು ಪ್ರಜಾಪ್ರಭುತ್ವದ ನೆಲೆಗಟ್ಟಿನಲ್ಲೆ ಸಾಮಾಜಿಕ ಸಮತೋಲನವನ್ನು ಸಾಧಿಸುವ ಆಶಯವನ್ನು ಹೊಂದಿದೆ. ಕಮ್ಯುನಿಸ್ಟ್‌ವಾದ ಚರಿತ್ರೆಯೆ ತೋರುವಂತೆ ಸರ್ವಾಧಿಕಾರಕ್ಕೆ ಎಡೆ ಮಾಡಿಕೊಡುತ್ತದೆ. ಇಡೀ ಸಮಾಜವಾದ ಹಾಗೂ ಕಮ್ಯುನಿಸ್ಟ್ ಪ್ರಯೋಗಗಳ ಗತಿಯನ್ನು ಗಮನಿಸಿದರೆ ಮನುಷ್ಯ ಮೂಲಭೂತವಾಗಿ ಸ್ವಾತಂತ್ರ್ಯವನ್ನುಳಿಸಿಕೊಂಡ ಸಮಾನತೆಯನ್ನು ಬಯಸುತ್ತಾನೆಂಬುದು ಸ್ಪಷ್ಟವಾಗುತ್ತದೆ. ಕಮ್ಯುನಿಸ್ಟ್ ವ್ಯವಸ್ಥೆ ಸರ್ವಾಧಿಕಾರಕ್ಕೆ ಕೊಂಡೊಯ್ಯುವುದು ಅನಿವಾರ್ಯವಾಗಿ ಕಂಡುಬಂದಾಗ ಜಗತ್ತಿನಾದ್ಯಂತ ಮನುಷ್ಯ ಸ್ವಾತಂತ್ರ್ಯದೆಡೆಗೆ ಒಲವು ತೋರಿಸುತ್ತಾನೆ. ಆದರೆ ವೈಯಕ್ತಿಕ ಸ್ವಾತಂತ್ರ್ಯ ಬಂಡವಾಳಶಾಹಿ ಶೋಷಣೆಯ ಹಂತ ತಲುಪಿದಾಗ ಸಮಾಜವಾದದತ್ತ ವಾಲುತ್ತಿದ್ದಾನೆ. ಒಟ್ಟಿನಲ್ಲಿ ಈ ಎರಡು ಬಗೆಯ ಅತಿರೇಕಗಳು ಎಂದರೆ ತೋಷಣೆಗೆ ಕಾರಣವಾಗುವ ಬಂಡವಾಳಶಾಹಿ ಅಥವಾ ಸ್ವಾತಂತ್ರ್ಯರಹಿತ ಸರ್ವಾಧಿಕಾರತ್ವಗಳು ಬುದ್ಧಿಜೀವಿ ಮನುಷ್ಯನಿಗೆ ಬೇಕಾಗಿಲ್ಲ. ಅವನಿಗೆ ವ್ಯಕ್ತಿಸ್ವಾತಂತ್ರ್ಯದ ನೆಲೆಗಟ್ಟಿನಲ್ಲಿ ಸಮಾಜದ ಸರ್ವತೋಮುಖ ಸಮತೋಲನ ಬೇಕಾಗಿದೆ. ಈ ಬಗೆಯ ಸಮತೋಲನ ವ್ಯಕ್ತಿಸ್ವಾತಂತ್ರ್ಯವನ್ನು ಪ್ರಥಮವಾಗಿ ಒಪ್ಪಿಕೊಂಡ ಸಮಾಜದಲ್ಲಿ ನಿರಂತರವಾಗಿ ಸ್ಥಾಯಿಯಾಗಿರಲು ಸಾಧ್ಯವಿಲ್ಲ. ಎರಡು ಅತಿರೇಕಗಳ ನಡುವೆ ತೊಯ್ದಾಟ ನಡೆದೇ ಇರುತ್ತದೆ.

> ವ್ಯಕ್ತಿಸ್ವಾತಂತ್ರ್ಯದ ನೆಲೆಗಟ್ಟಿನಲ್ಲಿ
> ಸಮಾಜದ ಸರ್ವತೋಮುಖ
> ಸಮತೋಲನ ಬೇಕಾಗಿದೆ

## ಸ್ವಯಂ ಸೇವಾಸಂಸ್ಥೆಗಳ ಪಾತ್ರ

ಆದ್ದರಿಂದ ವ್ಯಕ್ತಿಸ್ವಾತಂತ್ರ್ಯದ ನೆಲೆಗಟ್ಟಿನಲ್ಲಿ ಸಮಾಜದ ಸಮಸ್ಥಿತಿಗೆ ನೆರವಾಗುವುದೇ ಸ್ವಯಂಸೇವಾಸಂಸ್ಥೆಗಳ ಪಾತ್ರವಾದೀತು. ನಮ್ಮ ದೇಶ ಅಸಂಖ್ಯ ಅಸಮಾನತೆಗಳ ಆಗರ. ಆರ್ಥಿಕ ಅಸಮಾನತೆ, ಸಂಪನ್ಮೂಲಗಳ ಒಡೆತನದಲ್ಲಿ ಅಸಮಾನತೆ, ಜ್ಞಾನಾರ್ಜನೆಯ ಅವಕಾಶಗಳಲ್ಲಿ ಅಸಮಾನತೆ, ಜಾತಿಯ ಕಾರಣಗಳಿಂದಾಗಿ ಅಸಮಾನತೆ– ಹೀಗೆ ಅನೇಕ ಬಗೆಯ ಅಸಮಾನತೆಗಳಿವೆ. ಲಿಂಗಾಧಾರಿತ ಅಸಮಾನತೆಯಿಂದ ಸ್ತ್ರೀ ಸಮೂಹದ ಕಷ್ಟಪರಂಪರೆಗಳಿಗೆ ಕೊನೆಯೆ ಇಲ್ಲ. ಈ ಅಸಮಾನತೆಗಳ ವಿರುದ್ಧ ಸಂಘಟಿತ ಹೋರಾಟದ ಮೂರ್ತರೂಪವೆ ಸ್ವಯಂಸೇವಾ ಸಂಸ್ಥೆಗಳು. ಸ್ವಯಂಸೇವಾ ಹೋರಾಟಗಳು ಕೆಲವೊಮ್ಮೆ ದೊಡ್ಡ ಜನಾಂದೋಳನವಾಗಿ ಪರ್ಯವಸಾನವಾಗುವುದುಂಟು. ಹನ್ನೆರಡನೇ ಶತಮಾನದಲ್ಲಿ ವಚನಕಾರರು ಹುಟ್ಟುಹಾಕಿದ ಆಂದೋಳನ ಸಮಾನತೆ ಸಾಧಿಸಲು ನಡೆಸಿದ ಪ್ರಯತ್ನದ ಒಂದು ಅದ್ಭುತ ಚಾರಿತ್ರಿಕ ನಿದರ್ಶನ.

ಇಂತಹ ಹೋರಾಟದಲ್ಲಿ ತೊಡಗುವ ಎಲ್ಲ ಚಿಂತಕರನ್ನೂ ಕಾಡುವ ತಾತ್ವಿಕ ಪ್ರಶ್ನೆ ಎಂದರೆ ಎಲ್ಲರೂ ನಿಜವಾಗಿಯೂ ಸಮಾನರೆ ಎಂಬುದು. ಎಂಗೆಲ್ಸನು ಎಲ್ಲರಿಗೂ ಸಮಾನವಾದ ಸಾಮರ್ಥ್ಯವಿರದ ಕಾರಣ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಮನುಷ್ಯರೆಲ್ಲರಿಗೂ ಮೂಲಭೂತ ಆವಶ್ಯಕತೆಯನ್ನು ದೊರಕಿಸಿಕೊಳ್ಳಲಾಗುವುದಿಲ್ಲ ಎಂಬರ್ಥ ಬರುವಂತೆ ವಾದಿಸುತ್ತಾನೆ. **'ಪ್ರಜಾಪ್ರಭುತ್ವವು ತನ್ನ ಅತಿರೇಕದಿಂದಲೇ ನಾಶ ಹೊಂದುತ್ತದೆ'** (*Democracy ruins itself by excess of democracy*) ಎನ್ನುವ ಪ್ಲೇಟೋವಿನ ಮಾತಿನ ಹಿನ್ನೆಲೆಯೂ ಇದೆ. ಇವನು ಮನುಷ್ಯರ ನಡುವೆ ಸಾಮರ್ಥ್ಯದ ಅಸಮಾನತೆಯನ್ನು ಗುರುತಿಸಿ ಪ್ರಭುತ್ವದಲ್ಲಿ ಸಾಮರ್ಥ್ಯ ಉಳ್ಳವರು ಮಾತ್ರ ಆಡಳಿತವ್ಯವಸ್ಥೆಯನ್ನು ನೋಡಿಕೊಂಡರೆ ಒಳಿತು ಎಂದು ಅಭಿಪ್ರಾಯ ಪಡುತ್ತಾನೆ.

## ಅಸಮಾನತೆಯ ಹಿಂದೆ ಸಮಾನತೆ

ಈ ಬಗೆಯ ಅಸಮಾನತೆಯನ್ನು ಗುರುತಿಸುವವರೆಲ್ಲ ಮನುಷ್ಯನ ಮತ್ತು ಪ್ರಕೃತಿಯ ನಡುವೆ ನಡೆಯುವ ಪ್ರಕ್ರಿಯೆಯ ಪರಿಣಾಮವನ್ನು ಮನುಷ್ಯನ ಸಾಮರ್ಥ್ಯವನ್ನಳೆಯುವ ಮಾನದಂಡವಾಗಿ ಪರಿಗಣಿಸುತ್ತಾರೆ. ಆದರೆ ಭಾರತೀಯ ಸಂಸ್ಕೃತಿಯಲ್ಲಿ ಈ ಬಗೆಯ ಸಾಮರ್ಥ್ಯಕ್ಕೆ ಹೊರತಾದ ಮಾನವನ ಅಸ್ತಿತ್ವದ ಮತ್ತೊಂದು ಮುಖವನ್ನು ಗುರುತಿಸುತ್ತೇವೆ. ಅದೇ ಪ್ರತಿಯೊಬ್ಬನಲ್ಲೂ ಹುದುಗಿರುವ ಪರಿಪೂರ್ಣದೆಡೆಗೆ ಬೆಳೆಯಲು ಸಾಧ್ಯವಿರುವ ಸುಪ್ತ ಸಾಮರ್ಥ್ಯ. ಮನುಷ್ಯನೊಬ್ಬ ತನ್ನ ಮೂಲಭೂತ ಆವಶ್ಯಕತೆಗಳನ್ನು ಪಡೆಯುವ ಹಕ್ಕಿಗೆ ಈ ಸಾಮರ್ಥ್ಯವೇ ಸಾಕು. ಎಂದರೆ ಅವನು ಮನುಷ್ಯನಾಗಿದ್ದರೆ ಅದೇ ಸಾಕು. ವಚನಕಾರರ ಕಾಯಕವೆ ಕೈಲಾಸ ಒಂದು ಮಹಾವಾಕ್ಯ. ಪ್ರತಿಯೊಬ್ಬ ಮಾನವನೂ ತನ್ನ ತನ್ನ ಸ್ಥಾನದಲ್ಲಿ ಪ್ರಮುಖ, ಗೌರವಾನ್ವಿತ. ವ್ಯಕ್ತಿಗೌರವ ಅವನ ಕಸುಬಿನ ನಿಷ್ಠೆಯನ್ನು ಪರಿಣತಿಯನ್ನು ಅವಲಂಬಿಸಿದ್ದರೂ ಕಸುಬಿನ ವರ್ಗೀಕರಣಕ್ಕೆ ಸಂಬಂಧಿಸಿದ್ದಲ್ಲ. ಕಸುಬಿನಲ್ಲಿ ಮೇಲು ಕೀಳುಗಳಿಲ್ಲ. ಆದ್ದರಿಂದ ಎಲ್ಲಾ ಕಸುಬಿನ ವ್ಯಕ್ತಿಗಳೂ ಸಮಾನ ಗೌರವಕ್ಕೆ ಪಾತ್ರರು ಎಂಬ ಅದ್ಭುತ ಸಮಾನತಾ ತತ್ವವನ್ನು ಬಸವಣ್ಣನವರು ಆಚರಣೆಗೆ ತಂದು ತೋರಿದರು. ಆದ್ದರಿಂದ ಸಮಾನತೆ ಎಂಬುದು ಒಬ್ಬ ವ್ಯಕ್ತಿ ಉತ್ಪನ್ನ ಮಾಡುವ ವಸ್ತುವಿನ ಆರ್ಥಿಕ ಮೌಲ್ಯವನ್ನಾಧರಿಸಿರಬೇಕಾಗಿಲ್ಲ. ಅದನ್ನು ತಯಾರು ಮಾಡುವವನು ಮನುಷ್ಯನಾಗಿದ್ದರೆ ಸಾಕು. ಅವನನ್ನು ಸದ್‌ವ್ಯಕ್ತಿಯನ್ನಾಗಿ ಮಾಡಬೇಕಾದ ಕರ್ತವ್ಯ ಸಮಾಜದ್ದು.

## ಮಾನವೀಯ ಮೌಲ್ಯಗಳ ಕುರಿತ

ಆದರೆ ಕೈಗಾರಿಕೀಕರಣದ ಹಿನ್ನೆಲೆಯಲ್ಲಿ ಕಾರ್ಮಿಕ ತಾನು

ಉತ್ಪಾದಿಸುವ ವಸ್ತುಗಳ ಪರ್ಯಾಯರೂಪಮಾತ್ರವಾದಾಗ ಮಾನವೀಯ ಮೌಲ್ಯಗಳು ಕುಸಿಯುತ್ತವೆ, ಕಮ್ಯುನಿಸ್ಟ್ ವಾದದ ಏಕೈಕ ರೂಪಾಂತರಗಳು ವಿಜೃಂಭಿಸುತ್ತವೆ. ಇಂತಹ ವ್ಯವಸ್ಥೆಯಲ್ಲಿ ವಸ್ತುವಿನ ಹಿಂದಿರುವ ಶ್ರಮಕ್ಕೆ ಪರ್ಯಾಯವಾಗಿ ಕಾಸು ಚೆಲ್ಲಿದರೆ ಸಾಕೆಂಬ ಧೋರಣೆ ಹುಟ್ಟುತ್ತದೆ. ವಸ್ತುವಿನ ಬೆಲೆ ಕೇವಲ ಅದರ ಹಣದರೂಪದ ಬೆಲೆ ಎಂಬ ಗಾಢಭಾವನೆ ನಮ್ಮಲ್ಲಿ ಬೇರೂರಿದೆ. ಹಸಿವಾದಾಗ ಅಕ್ಕಿಗೆ ಬದಲು ಹಣವನ್ನು ತಿನ್ನಲಾಗುವುದಿಲ್ಲ, ಬಾಯಾರಿದಾಗ ನೀರಿಗೆ ಬದಲು ಹಣವನ್ನು ಕುಡಿಯಲಾಗುವುದಿಲ್ಲ ಎಂಬ ಸತ್ಯವನ್ನು ಪ್ರತಿಯೊಬ್ಬರೂ ಮನಗಾಣಬೇಕು. ಪ್ರತಿಯೊಂದು ವಸ್ತುವಿಗೂ ಹಣದೊಂದಿಗೆ ವಿನಿಮಯ ಮಾಡಿಕೊಳ್ಳಲಾಗದ ಅಂತರ್ಗತ ಮೌಲ್ಯ ಒಂದಿದೆ. ಅದು ಮನುಷ್ಯನ ಶ್ರಮಕ್ಕೆ ಸಲ್ಲಬೇಕಾದ ಗೌರವದ ದ್ಯೋತಕ, ಹಾಗೆ ಮನುಷ್ಯಮಾತ್ರದವನು ಸೃಷ್ಟಿಸಲಾಗದ ಪ್ರಕೃತಿಯ ಕೊಡುಗೆ–ಈ ಭಾವನೆಗಳ ಹಿನ್ನೆಲೆಯಲ್ಲಿ ಮಾಡುವ ಸಮಾನತೆಯನ್ನು ವಚನಕಾರರು ಆಚರಿಸಿ ತೋರಿದರು.

## ಆಧುನಿಕ ಪ್ರಯತ್ನಗಳು

ಹತ್ತೊಂಬತ್ತನೆ ಶತಮಾನದ ಕೊನೆಯಲ್ಲಿ ಸ್ವಾಮಿ ವಿವೇಕಾನಂದರು ಸಮಾಜದ ಸಮತೋಲನ ಸಾಧಿಸಲು ರಾಷ್ಟ್ರಾದ್ಯಂತ ಜಾಗೃತಿ ಮೂಡಿಸಿದರು. 'ಪ್ರತಿಯೊಬ್ಬನೂ ದೈವಾಂಶ ಸಂಭೂತನು' ಎಂಬುದು ಅವರ ಮಹಾವಾಕ್ಯವಾಗಿತ್ತು. 'ದರಿದ್ರ ನಾರಾಯಣ ಸೇವೆ'ಯನ್ನು ಅವರು ದೇಶದ ಆದರ್ಶವನ್ನಾಗಿ ಮಾಡಲು ಶ್ರಮಿಸಿದರು. ಹಾಗೆಯೆ ಅವರು ಅಭಿವೃದ್ಧಿಕಾರ್ಯದ ಬಗ್ಗೆ ಅತ್ಯಾಧುನಿಕ ಚಿಂತನೆಯನ್ನು ಮಂಡಿಸಿದರು. ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಇಂದು ನಡೆಯುತ್ತಿರುವ ಅಭಿವೃದ್ಧಿ ಕಾರ್ಯ ಸ್ವಾಮೀಜಿಯವರ ಕರೆಯಿಂದ ಚಾಲನೆಗೊಂಡಿದ್ದೆಂದು ಬೇರೆ ಹೇಳಬೇಕಾಗಿಲ್ಲ.

ಸ್ವಾತಂತ್ರ್ಯಪೂರ್ವದಲ್ಲಿ ಸಾಮಾಜಿಕ ಸಮತೋಲನ ತರುವಲ್ಲಿ ಮಹಾತ್ಮಾ ಗಾಂಧೀಜಿಯವರ ಪಾತ್ರ ಬಹುಹಿರಿದಾದ್ದು. ಅವರು ಸಂಪತ್ತಿನ ಸಮಾನ ಹಂಚಿಕೆ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ಬಗ್ಗೆ ಸ್ಪಷ್ಟ ನಿಲುವು ತಳೆದಿದ್ದರು. ಶ್ರೀಮಂತರು ತಮ್ಮ ಹಣವನ್ನು ಸಾರ್ವಜನಿಕ ಹಿತಾಸಕ್ತಿಗೆ ಬಳಸಬೇಕೆಂದೂ ಮತ್ತು ತಮ್ಮ ಸಂಪತ್ತಿನ ಬಗ್ಗೆ ಅವರು ಸಾರ್ವಜನಿಕ ಟ್ರಸ್ಟಿಗಳ ಹಾಗೆ ವರ್ತಿಸಬೇಕೆಂದೂ ಕರೆ ನೀಡಿದ್ದರು. 'ನನಗೆ ಬಂಡವಾಳಶಾಹಿ ಸ್ನೇಹಿತರಿದ್ದಾರೆ. ಆದರೆ ನಾನೆಂದೂ ಬಂಡವಾಳಶಾಹಿಯನ್ನು ಬೆಂಬಲಿಸುವುದಿಲ್ಲ. ಬದಲಿಗೆ ಸಮಾಜವಾದಿಗಳ ಹಾಗೆ ಅಥವಾ ಕಮ್ಯುನಿಸ್ಟರು ಬಯಸುವ ಹಾಗೆ ಬಂಡವಾಳಶಾಹಿ ವ್ಯವಸ್ಥೆಯನ್ನು ಸಂಪೂರ್ಣ ಕೊನೆಗೊಳಿಸಲು ಇಚ್ಛಿಸುತ್ತೇನೆ. ಆದರೆ ನನ್ನ ವಿಧಾನ ಬೇರೆ. ನಾನು ಅಹಿಂಸೆಯನ್ನಲ್ಲದೆ ಅನ್ಯ ಮಾರ್ಗವನ್ನು ಒಪ್ಪಲಾರೆ' ಎನ್ನುತ್ತಾರೆ ಗಾಂಧೀಜಿ. ಅಹಿಂಸಾಪ್ರಧಾನವಾದ ಗಾಂಧೀವಾದ ಸಾಕಷ್ಟು ಸ್ವಯಂಸೇವಾ ಕೆಲಸವನ್ನು ದೇಶದಲ್ಲಿ ಪ್ರಚೋದಿಸಿತು. ಗಾಂಧೀಜಿಯಂತಹ ವ್ಯಕ್ತಿ ಒಂದು ಬಹುದೊಡ್ಡ ನಡೆದಾಡುವ ಸ್ವಯಂ ಸೇವಾಸಂಸ್ಥೆ ಎಂದೇ ಹೇಳಬಹುದು.

## ಭಾರತದ ದೌರ್ಬಲ್ಯ

ಈ ಎಲ್ಲ ಸ್ವಯಂಸೇವಾ ಪ್ರಯತ್ನಗಳು ನಡೆದಿದ್ದರೂ ಭಾರತ ತಲುಪಬೇಕಾದ ಗುರಿ ದೂರವೇ ಉಳಿದಿದೆ. ನಮ್ಮದು ಬೃಹತ್ ಸಮಸ್ಯೆಗಳ ಬೃಹತ್ ದೇಶ. ಪ್ರಪಂಚದಾದ್ಯಂತ ಸಮತೋಲನ ಸಾಧಿಸಲು ನಡೆದ ಎಲ್ಲ ಪ್ರಯೋಗಗಳ ಫಲಶ್ರುತಿ ನಮ್ಮೆದುರಿಗೇ ಇದೆ. ಬಂಡವಾಳ ವ್ಯವಸ್ಥೆಯ ಮುಖಾಂತರ ಪ್ರಗತಿಯನ್ನು ಸಾಧಿಸಿದ ಇಂಗ್ಲೆಂಡ್, ಅಮೆರಿಕಾ, ಜಪಾನ್‌ಗಳು ಪ್ರಥಮ ಜಗತ್ತಿನ ರಾಷ್ಟ್ರಗಳಾದವು. ಆ ತರುವಾಯ ಸಮಾಜವಾದಿ ಆಂದೋಲನದ ಮುಖಾಂತರ ಸೋವಿಯಟ್ ರಷ್ಯ ಮತ್ತು ಇತರ ಪೂರ್ವ ಯೂರೋಪ್ ದೇಶಗಳು ಪ್ರಗತಿಯನ್ನು ಸಾಧಿಸಿ ದ್ವಿತೀಯ ಜಗತ್ತಿನ ರಾಷ್ಟ್ರಗಳು ಎಂದೆನಿಸಿಕೊಂಡವು. ಆದರೆ ಅಭಿವೃದ್ಧಿ ಒಂದು ಮರೀಚಿಕೆಯಂತೆ ಕಾಡುತ್ತಿರುವುದು ಭಾರತ, ಆಫ್ರಿಕ, ಲ್ಯಾಟಿನ್ ಅಮೆರಿಕಾದಂತಹ ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ. ನಿರಕ್ಷರತೆ, ಭ್ರಷ್ಟಾಚಾರ, ಜನಸಂಖ್ಯೆಯ ಹೆಚ್ಚಳ ಭಾರತದ ಪ್ರಧಾನ ಸಮಸ್ಯೆ. ಸಂಪನ್ಮೂಲಗಳ ದೃಷ್ಟಿಯಲ್ಲಿ ಭಾರತ ಅದೃಷ್ಟಶಾಲಿಯೆಂದೇ ಹೇಳಬೇಕು. ಆದರೆ ಅಭಿವೃದ್ಧಿಗೆ ಕಂಟಕವಾಗಿರುವುದು ನಮ್ಮ ದುರ್ಬಲ ಸಂಘಟನಾ ಶಕ್ತಿ. ಭ್ರಷ್ಟಾಚಾರವನ್ನು ವಿರೋಧಿಸುವ ಒಂದು ಆಂದೋಳನವೂ ನಮ್ಮ ದೇಶದಲ್ಲಿ ಈವರೆಗೆ ನಡೆಯಲಿಲ್ಲ. ಸ್ವಯಂಸೇವಾಸಂಸ್ಥೆಗಳು ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿವೆ. ಅದನ್ನು ಮತ್ತಷ್ಟು ತೀವ್ರಗೊಳಿಸಬೇಕು.

ಅಭಿವೃದ್ಧಿಗೆ ಕಂಟಕವಾಗಿರುವುದು ನಮ್ಮ ದುರ್ಬಲ ಸಂಘಟನಾ ಶಕ್ತಿ. ಭ್ರಷ್ಟಾಚಾರವನ್ನು ವಿರೋಧಿಸುವ ಒಂದು ಆಂದೋಳನವೂ ನಮ್ಮ ದೇಶದಲ್ಲಿ ಈವರೆಗೆ ನಡೆಯಲಿಲ್ಲ.

## ಜನಜಾಗೃತಿ

ಸ್ವಯಂಸೇವಾಕಾರ್ಯ ಎಂದರೆ ಕೆಲವು ಕಟ್ಟಡಗಳನ್ನು ಕಟ್ಟಿ ಕೇಂದ್ರೀಕೃತ ಚಟುವಟಿಕೆಗಳನ್ನು ನಡೆಸುವುದು ಎಂದು ಭಾವಿಸುವುದುಂಟು. ಆದರೆ ಸಮಾಜದ ಸಮತೋಲನ ತರಬಲ್ಲ ಸಮಾಜಕಾರ್ಯ ಕಟ್ಟಡಗಳ ಹೊರಗೆ ಜನಸಮುದಾಯಗಳೊಡನೆ ಬೆರೆತು ಮಾಡುವ ಕೆಲಸವಾಗಿದೆ. ಮುಖ್ಯವಾಗಿ ಆಯಾಪ್ರದೇಶಗಳ ಸಮಸ್ಯೆಗಳ ಹಿನ್ನೆಲೆಯಲ್ಲಿ ಜನ ಜಾಗೃತಿ ಮೂಡಿಸಿದರೆ, ಸಮಸ್ಯೆಯ ಉಗಮದ ಅರಿವು ಮೂಡಿಸಿದರೆ, ಪರಿಹಾರೋಪಾಯಗಳನ್ನು ಜನರೇ ಆಲೋಚಿಸಿ ಕಂಡು ಹಿಡಿಯುವಂತೆ ಮಾಡಿದರೆ ನಿಜವಾದ ಸಮತೋಲನ–ಪ್ರಗತಿ ಸಾಧಿಸಬಹುದು. ಈ ದೇಶದ ವಿದ್ಯಾವಂತರೆಲ್ಲರೂ ಸ್ವಯಂಸೇವಾ ಸ್ಫೂರ್ತಿ ಪಡೆದು ಸ್ಥಳೀಯ ಸಂಪನ್ಮೂಲಗಳನ್ನು ಬಳಸಿ ಜನ ಜಾಗೃತಿ ಮೂಡಿಸುವ ಕಾರ್ಯ ಕೈಗೊಂಡರೆ ನಾವು ಆಶಿಸುವ ಸಮತೋಲನ ಸಾಧ್ಯ. ಅಣ್ಣಾ ಹಜಾರೆಯಂತಹ ವ್ಯಕ್ತಿಯೊಬ್ಬರು ಸಾಧಿಸಿದ ಪ್ರಗತಿ ಮುರುಟಿ ಹೋದ ನಮ್ಮ ಕನಸುಗಳನ್ನು ಪುನಃ ಚಿಗುರಿಸುತ್ತದೆ, ಸ್ವಯಂಸೇವೆಯಿಂದ ಸಾಧಿಸಬಹುದಾದ ಪ್ರಗತಿಯ ಬಗ್ಗೆ ನಂಬಿಕೆಯನ್ನು ಪುನರ್‌ಸ್ಥಾಪಿಸುತ್ತದೆ. ಬೃಹತ್ ಜನಸಂಖ್ಯೆಯ ಈ ರಾಷ್ಟ್ರದಲ್ಲಿ ಬೆರಳೆಣಿಕೆಯ ಸ್ವಯಂಸೇವಕರು ಏನು ತಾನೆ ಸಾಧಿಸಬಲ್ಲರು ಎಂಬ ಪ್ರಶ್ನೆ ಇದ್ದದ್ದೆ. ಆದರೂ ಗುಣಾತ್ಮಕ ಕೆಲಸಗಳ ಮಾದರಿಗಳನ್ನಾದರೂ ಸಾಧಿಸಿ ತೋರಿಸಬಹುದು. ಸರ್ಕಾರ ವಿಫಲವಾದ ವಲಯಗಳಲ್ಲಿ ಪರ್ಯಾಯ ಮಾರ್ಗಗಳನ್ನು ಸೂಚಿಸಬಹುದು. ಅಲ್ಲದೆ ಸ್ವಯಂಸೇವೆಯ ಸ್ಫೂರ್ತಿಯನ್ನು ದೇಶದ ನರನಾಡಿಗಳಲ್ಲಿ ತುಂಬುವ ಕೆಲಸವನ್ನು ಸ್ವಯಂಸೇವಾ ಸಂಸ್ಥೆಗಳಷ್ಟೇ ಮಾಡಬಲ್ಲವು. **ಸ್ವಾತಂತ್ರ್ಯದ ನಂತರ ೫೦ ವರ್ಷಗಳಲ್ಲಿ ಸರ್ಕಾರ ಸಾಧಿಸಲಾಗದ ಪ್ರಗತಿಯನ್ನು ಕೆಲವು ಸ್ವಯಂಸೇವಾಸಂಸ್ಥೆಗಳು ಗಿರಿಜನ ಪ್ರದೇಶಗಳಲ್ಲಿ ಕೇವಲ ಹತ್ತು-ಹದಿನೈದು ವರ್ಷಗಳಲ್ಲಿ ಸಾಧಿಸಿ ತೋರಿಸಿವೆ.** ಈ ಬಗೆಯ ಸ್ವಯಂಸೇವಾ ಸಂಸ್ಥೆಗಳು ಹೆಚ್ಚು ಹೆಚ್ಚು ಬೆಳೆದರೆ ನಾವು ಬಯಸುವ ಪ್ರಗತಿ ಮತ್ತು ಸಾಮಾಜಿಕ ಸಮತೋಲನ ಸಾಧ್ಯ. [*ಮೈಸೂರು ಆಕಾಶವಾಣಿಯ ಕೃಪೆಯಿಂದ*]